

# ನಮ್ಮ ಮಕ್ಕಳು ಹೀಗೇಕೆ?



ಪೋಷಕರೇ ನಿಮ್ಮ ಮಕ್ಕಳ ಮಾನಸಿಕ ಬೆಳವಣಿಗೆಯಲ್ಲಿ ಅಸಹಜತೆ ಕಂಡು ಬರುತ್ತಿದೆಯೇ? ನಿಮ್ಮ ಸಮಸ್ಯೆಗಳಿಗೆ ಆತಂಕಗಳಿಗೆ ಮನೋವಿಜ್ಞಾನಿ **ಡಾ.ಅ.ಶ್ರೀಧರ** ಅವರು ಉತ್ತರಿಸುತ್ತಾರೆ.

▸▸ನನ್ನ ಮಗುವಿಗೆ ಈಗ 6 ವರ್ಷ ತುಂಬಿದೆ. ಒಳ್ಳೆಯ ಶಾಲೆಗೆ ಅವನನ್ನು ಸೇರಿಸಲು ಸಾಧ್ಯವಾಗಿಲ್ಲ. ಏಕೆಂದರೆ ಅವನ ಮಾತಿನ ಬೆಳವಣಿಗೆ ತುಂಬಾ ಹಿಂದೆ ಉಳಿದಿದೆ. ಅವನಿಗೆ ಹುಟ್ಟಿದಾಗಿನಿಂದಲೂ ಒಂದಲ್ಲಾ ಒಂದು ರೀತಿಯ ಆರೋಗ್ಯದ ಸಮಸ್ಯೆ ಇದೆ. ಅವನು ಹುಟ್ಟಿದ ತಕ್ಷಣದಲ್ಲಿ ಎಲ್ಲ ಮಕ್ಕಳಂತೆ ಬಾಯಿಂದ ಶಬ್ದ ಮಾಡಿದ್ದುಂಟು. ಆದರೆ ನಂತರದ ಒಂದು ವರ್ಷವೂ ಹೀಗೆಯೇ ಮುಂದುವರೆದಿತ್ತು ಅವನ ಮಾತು ಕಲಿಯುವ ರೀತಿ. ಎಷ್ಟೋ ಬಾರಿ ಒಂದೆರಡು ಮಾತುಗಳ ನಂತರ ಮುಂದಿನ ಶಬ್ದ ಬಾಯಿಂದ ಬರುತ್ತಲೇ ಇರಲಿಲ್ಲ (ಅವನ ಚಿಕ್ಕಪ್ಪ ಮತ್ತು ಅಜ್ಜನಲ್ಲಿಯೂ ಸ್ವಲ್ಪ ಮಾತಿನ ತೊಂದರೆ ಇದೆ). ಆದರೆ ನಾವು ಹೇಳಿದ್ದು ಕೇಳಿಸಿಕೊಂಡು ತೆಪ್ಪಗೆ ಇರುತ್ತಿದ್ದ. ಊಟ, ತಿಂಡಿ ವಿಷಯಗಳಲ್ಲೂ ವಿಪರೀತ ಸಾವಧಾನ. ತಿನ್ನುವಾಗ ಮುಖದಲ್ಲಿ ಆನಂದವೇ ಇರುತ್ತಿರಲಿಲ್ಲ, ಯಾವಾಗಲೂ ಸಪ್ಪೇ ಮುಖ. ಸುಮಾರು ಮೂರು ವರ್ಷದವನಾಗಿದ್ದಾಗ ಎಲ್ಲ ಮಕ್ಕಳಂತೆ ಇರಲಿಲ್ಲ ಆದರೂ ಕೆಲ ಚಟುವಟಿಕೆಗಳಲ್ಲಿ ಚುರುಕಿದ್ದ. ಆದರಲ್ಲಿಯೂ ವಿಶೇಷವಾಗಿ ಇದ್ದಿಲಿನ ಸಣ್ಣ ತುಂಡುಗಳಿಂದ ಚಿತ್ರ ಬಿಡಿಸುವುದು (ಈಗಲೂ ಮುಂದುವರೆದಿದೆ). ಈ ಸಮಯದಲ್ಲಿ ಅವನಿಗೆ ಗ್ರಹಗತಿ ನೆಟ್ಟಗಿಲ್ಲವೆನ್ನುವುದು ತಿಳಿದು ನಿಷ್ಠೆಯಿಂದ ಪೂಜೆ, ಪೀಡಾ ಪರಿಹಾರ ಮಾಡಿದೆವು. ತನ್ನ 5ನೇ ವರ್ಷದಿಂದ ಮಾತಾಡಲು ಯತ್ನಿಸಿದ್ದಾನೆ ಎನ್ನುವುದು ಸ್ಪಷ್ಟವಾಗಿ ಕಂಡುಬಂತು. ಮನೆಯಲ್ಲಿಯೇ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿದೆವು. ಸರಳವಾಗಿರುವ ಪದಗಳನ್ನು ಹೇಳುತ್ತಿದ್ದ, ಈಗಲೂ ಹಾಗೆಯೇ ಮುಂದುವರೆದಿದೆ. ಅವನ ಈ ಸಮಸ್ಯೆಗೆ ಚಿಕಿತ್ಸೆ ಇಲ್ಲವೆನ್ನುವ ಅಭಿಪ್ರಾಯ ಮನೆ ಮಂದಿಯಲ್ಲಿದೆ. ಆದರೆ ತಾಯಿಯಾದ ನನಗೆ ನನ್ನ ಮಗನಲ್ಲಿರುವ ರೋಗ ನಿವಾರಣೆಯಾಗಬಲ್ಲದು ಎನ್ನುವ ವಿಶ್ವಾಸವಿದೆ. ಯಾವ ರೀತಿಯ ಚಿಕಿತ್ಸೆ ಮತ್ತು ಶಿಕ್ಷಣ ಅವನಿಗೆ ಕೊಡಿಸಿದರೆ ಸೂಕ್ತವೆನ್ನುವುದು ತಿಳಿಯುತ್ತಿಲ್ಲ. ದಯಮಾಡಿ ತಿಳಿಸಿಕೊಡಿ.

–ಅರುಂಧತಿ ಆಚಾರ್ಯ, ಮಂತ್ರಾಲಯ

ನಿಮ್ಮ ಮಗುವಿನ ಸಮಸ್ಯೆ ಮಾತಿನ ಬೆಳವಣಿಗೆಗೆ ಸಂಬಂಧಿಸಿದ್ದು ಎನಿಸುತ್ತದೆ. ಇಂತಹ ಸಮಸ್ಯೆಗಳು ಅಪರೂಪವೇನಲ್ಲ. ಹಾಗೆಯೇ ಈ ಮಾದರಿಯ ಸಮಸ್ಯೆಗಳಿರುವ ಎಲ್ಲರಲ್ಲೂ ಸಮಾನ ರೀತಿಯ ಮಾನಸಿಕ, ಶಾರೀರಿಕ ಸಮಸ್ಯೆಗಳು ಇರುತ್ತವೆ ಎಂದು ಹೇಳವುದು ಸುಲಭವಲ್ಲ. ಆದುದರಿಂದಲೇ ಚಿಕಿತ್ಸೆ, ಚೇತರಿಕೆಯ ರೀತಿಯ ಬಗ್ಗೆ ಖಚಿತವಾಗಿ ಹೇಳುವುದು ಕಷ್ಟ. ನಿಮ್ಮ ಮಗು ಮಾತಾಡುವ ಪ್ರಯತ್ನ ಮಾಡುತ್ತಾನೆ ಆದರದು ಅರ್ಥಪೂರ್ಣವಾದ ನುಡಿಗಳಾಗಿ ಬಾಯಿಂದ ಹೊರಬರುತ್ತಿಲ್ಲ ಎನ್ನುವುದೇ ಗಮನಿಸಬೇಕಿರುವ ವಿಷಯ. ಅಂದ ಮೇಲೆ ಕೇಳುತ್ತಿರುವ ಮಾತುಗಳು ಅರ್ಥವಾಗುತ್ತದೆ ಎನ್ನಬಹುದು. ಹಾಗಾದರೆ ಮಾತು ಅರ್ಥವಾದರೂ ಮಾತಾಡುತ್ತಿಲ್ಲವೇಕೆ ಎನ್ನುವ ಪ್ರಶ್ನೆ ನಿಮ್ಮ ಮನಸ್ಸಿಗೆ ಬಂದಿರಬಹುದು, ಇದು ಸಹಜವೇ. ಆದರೆ ಮಾತು ಕೇಳಿಸಿಕೊಂಡನಂತರ ಅವುಗಳನ್ನು ಹೊರತರುವ ಪ್ರಯತ್ನವಾಗುವುದು ಅಥವಾ ಹೊರಬರುವುದು ಬಾಯಿ ಮೂಲಕ. ಮಿದುಳಿಗೆ ಸಂಬಂಧಿಸಿದ ಕ್ರಿಯೆ ಭಾಷೆಯಾಗಿದ್ದರೂ ಗಂಟಲು, ಮೂಗು, ನಾಲಿಗೆ, ತುಟಿಗಳ ಸಮನ್ವಯತೆಯ ಅಗತ್ಯವಿದ್ದೇ ಇರುತ್ತದೆ. ಈ ಅಂಗಗಳ ಅಸಮರ್ಪಕ ಕಾರ್ಯವೈಖರಿಯು ಬಹುತೇಕ ಮಾತಿನ ತೊಂದರೆ/ ದೋಷಗಳಿಗೆ ಮೂಲ. ಈ ಅಂಗಗಳ ಸ್ನಾಯುವಿನ ಹಿಡಿತ– ಬಿಗಿತಗಳ ಅನುಗುಣವಾಗಿ ಮಾತಿನ ಧ್ವನಿಗಳು ಹೊರಬರುತ್ತವೆ. ಆರೋಗ್ಯವಂತ ಮಕ್ಕಳಲ್ಲಿಯೂ ಸಹಜವಾಗಿ ನೆರವೇರುತ್ತದೆ. ಆದರಿವುಗಳಿಗೆ ತೊಂದರೆ ಉಂಟಾದಾಗ ಮಾತಿನ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಇಂತಹ ತೊಂದರೆ/ ದೋಷ ಇರುವವರಲ್ಲಿ ತುಟಿ, ನಾಲಿಗೆ ಗಂಟಲಿನಿಂದಾಗುವ ಸಮನ್ವಯತೆ ಸರಿಯಾಗಿ ಇರುವುದಿಲ್ಲ. ಇದರಿಂದಾಗಿ ಮಾತಿನ ಉಚ್ಚಾರಣೆ, ಅಕ್ಷರಗಳ ಜೋಡಣೆ ಮತ್ತು ದನಿ ಹಿಡಿತ ಬಿಗಿತಗಳು ಸರಿಯಾಗಿ ಕೇಳಿಬರುವುದಿಲ್ಲ. ಹೀಗಾಗಿ ಮೂಗಿನ ಮೂಲಕವೋ, ಗಂಟಲಿನ ಮೂಲಕವೂ ಮಾತಿನ ಶಬ್ದಗಳು ಹೊರಬರಬಹುದು. ಇದನ್ನು ಸತತ ಕಲಿಕೆ/ ಅಭ್ಯಾಸದ ಮೂಲಕ ಸರಿಪಡಿಸುವ ಪ್ರಯತ್ನ ಮಾಡುತ್ತಾರೆ ವಾಕ್– ಶ್ರವಣ ತಜ್ಞರು. ಮಗುವಿನ ಮಾತಾಡುವ ಸಮಸ್ಯೆಯ ಮೂಲ ಕಾರಣವನ್ನು ತಿಳಿದುಕೊಂಡು ಅದಕ್ಕೆ ಸರಿಹೊಂದುವಂತಹ ಚಿಕಿತ್ಸಾ ಕ್ರಮವನ್ನು ಸೂಚಿಸುತ್ತಾರೆ. ಅಂದರೆ ಕ್ರಮಬದ್ಧವಾಗಿ ಮಾತಾಡುವುದನ್ನು ಕಲಿಸುತ್ತಾರೆ. ಮಾತಾಡುವ ತೊಂದರೆ ಇರುವ ಇನ್ನೊಂದು ಮಗುವಿಗೆ ನೀಡಲಾಗುತ್ತಿರುವ ಚಿಕಿತ್ಸೆ ನಿಮ್ಮ ಮಗುವಿಗೂ ಅನ್ವಯಿಸುತ್ತದೆ ಎಂದುಕೊಂಡು ನೀವೇ ಚಿಕಿತ್ಸಕರಾಗುವುದು ಬೇಡ. ಚಿಕಿತ್ಸೆಯ ಕ್ರಮದಲ್ಲಿ ನಿಮ್ಮ ಪಾತ್ರ ಬಹಳ ಮುಖ್ಯವಾಗಿಯೇ ಇರುತ್ತದೆ. ಆದರೆ ತಜ್ಞರ ಸಲಹೆಯ ಮೂಲಕ ಮಾಡುವುದರಿಂದ ಮಗುವಿನ ಸಮಸ್ಯೆಗಳಿಗೆ ಶೀಘ್ರ ಮತ್ತು ಉತ್ತಮ ಪರಿಹಾರ ಖಂಡಿತ ಸಾಧ್ಯ. ನಿಮ್ಮ ಮಗುವಿಗೆ ಇತರರು ಆಡುವ ಮಾತುಗಳು ಚೆನ್ನಾಗಿ ಅರ್ಥವಾಗುತ್ತದೆ ಎನ್ನುವುದು ಇಲ್ಲಿ ಗಮನಿಸಬೇಕಿರುವ ವಿಷಯ. ಕಲಿಯುವ ಶಕ್ತಿ ಅವನಲ್ಲಿದೆ ಎನ್ನುವ ವಿಶ್ವಾಸ ನಿಮ್ಮಲ್ಲೂ ಬರಬೇಕು. ಅವನಿಗೆ ಮಾತು ಬರದು ಎನ್ನುವ ಕಾರಣದಿಂದ ನಿಂದಿಸುವುದು, ಹೀಯಾಳಿಸುವುದು ಅಥವಾ ಭಯ ಹುಟ್ಟಿಸುವಂತಹ ಕ್ರಮಗಳಿಂದ ದೂರವಿರಿ. ಮಗುವಿನಲ್ಲಿ ಕಂಡು ಬಂದಿರುವ ಸಮಸ್ಯೆಗಳ ನಿವಾರಣೆಯ ಕ್ರಮದಲ್ಲಿ ವಾಕ್– ಶ್ರವಣ ತಜ್ಞರ ಪಾತ್ರ ತುಂಬಾ ದೊಡ್ಡದು. ಅವರ ಸಲಹೆ, ಮಾರ್ಗದರ್ಶನ ತಕ್ಷಣದಲ್ಲಿ ಪಡೆಯಿರಿ.

▸▸ನನಗೆ 7 ವರ್ಷದ ಅವಳಿ ಗಂಡು ಮಕ್ಕಳಿದ್ದಾರೆ. ಇದರಲ್ಲೊಬ್ಬ ನಮ್ಮ ಮಾತನ್ನು ಕೊಂಚವೂ ಕೇಳಲ್ಲ. ಹಾಗೆ ನೋಡಿದರೆ ಯಾರಿಗೂ ಮುಲಾಜು ಕೊಡಲ್ಲ. ಸಹಪಾಠಿಗಳ ಜೊತೆ, ಮನೆಯವರ ಜೊತೆ ಸದಾ ಜಗಳ. ಇನ್ನೊಬ್ಬ ಹಾಗಿಲ್ಲ. ತುಂಬಾ ಸಭ್ಯಸ್ಥ. ಇಬ್ಬರೂ ಒಂದೇ ಶಾಲೆಗೆ ಹೋಗುತ್ತಾರೆ ಆದರೆ ಬೇರೆ ಬೇರೆ ಸೆಕ್ಷನ್‌ನಲ್ಲಿದ್ದಾರೆ. ಇವನಿಗೆ ಯಾವುದೋ ರೀತಿಯ ಮಾನಸಿಕ ಸಮಸ್ಯೆ (ನಡವಳಿಕೆ ದೋಷ) ಇದೆ. ಎನ್ನುವುದು ತಿಳಿದು ಬಂದಿದೆ. ಇವನನ್ನ ಸರಿ ದಾರಿಗೆ ತರಲು ಏನು ಮಾಡಬೇಕು ಎನ್ನುವುದನ್ನು ದಯಮಾಡಿ ತಿಳಿಸಿ. ನಾನು ಮತ್ತು ನನ್ನ ಹೆಂಡತಿ ನೌಕರಿಯಲ್ಲಿರುವುದರಿಂದ ಮಕ್ಕಳ ಕಡೆ ಗಮನ ಹರಿಸುತ್ತಿಲ್ಲ ಎನ್ನುವ ಮಾತು ಇದೆ. ಆದರೆ ನಮ್ಮ ಮಕ್ಕಳ ಎಲ್ಲಾ ಅಗತ್ಯಗಳನ್ನು ತಪ್ಪದೇ ಪೂರೈಸುತ್ತೇವೆ. ಅವಳಿಗಳಲ್ಲಿ ಒಬ್ಬ ಮಾತ್ರ ಹೀಗಾಗಿರುವುದು ತುಂಬಾ ಸಂಕಟದ ವಿಷಯ. ನಮ್ಮ ಹುಡುಗನ ಮನಸ್ಸನ್ನು ಸರಿಪಡಿಸುವ ರೀತಿ ಯಾವುದೆನ್ನುವುದನ್ನು ದಯಮಾಡಿ ತಿಳಿಸಿ.

–ಬಷೀರ್ ಅಹಮದ್, ಬಿಜಾಪುರ

ನಿಮ್ಮ ಹುಡುಗನಿಗೆ ಮಾನಸಿಕ ಸಮಸ್ಯೆಯಿದೆ ಎನ್ನುವುದು ತಿಳಿದಿರುವುದರಿಂದ ಅದರ ನಿಯಂತ್ರಣದ ಕಡೆ ಗಮನ ಹರಿಸುವುದಕ್ಕೆ ಮುನ್ನ ಈ ಸಮಸ್ಯೆಯ ಬಗ್ಗೆ ಸರಿಯಾದ ಮಾಹಿತಿ ಪಡೆದುಕೊಳ್ಳುವುದು ಮುಖ್ಯ. ಇಂತಹ ಸಮಸ್ಯೆ ಇರುವ ಮಕ್ಕಳಲ್ಲಿ ಇತರರ ಭಾವನೆಗಳನ್ನು ಕಡೆಗಣಿಸುವುದು ಸಾಮಾನ್ಯ. ತಮ್ಮನ್ನು ಯಾವುದೋ ಕಳಂಕದಿಂದ ರಕ್ಷಿಸಿ ಕೊಳ್ಳುವ ಮನದ ಸ್ಥಿತಿ ಸದಾ ಇರುತ್ತದೆ. ಹೀಗಾಗಿ ಒರಟುತನ, ಜಗಳ, ನಿಂದನೆಯ ಗುಣಗಳು ಹೆಚ್ಚಾಗಿರುತ್ತವೆ. ಈ ಹುಡುಗನಿಗೆ ಸಣ್ಣ ವಯಸ್ಸು ಇರುವುದರಿಂದ ಮತ್ತು ಅವನ ಅವಳಿ ಸಹೋದರ ಸೌಮ್ಯ ಸ್ವಭಾವದವನಾಗಿರುವುದರಿಂದ ಅವನ ಮೂಲಕ ನಡೆ ನುಡಿಯಲ್ಲಿನ ಬದಲಾವಣೆಯ ಪ್ರಯತ್ನ ಮಾಡಬಹುದು. ಆದರೆ ಹೋಲಿಕೆಯಿಂದ ಸರಿಪಡಿಸ ಬೇಡಿ. ಪ್ರಶಂಸೆ, ಪುರಸ್ಕಾರ ಮತ್ತು ಶಿಕ್ಷೆಯ ಮೂಲಕವೇ ವರ್ತನೆಯ ಮಾರ್ಪಾಡಾಗಬೇಕು. ಅವನ ಆಸಕ್ತಿ, ಕುತೂಹಲಗಳನ್ನು ಸರಿಯಾಗಿ ಅರ್ಥ–ಮಾಡಿಕೊಂಡು ಅದಕ್ಕೆ ಸರಿಹೊಂದುವ ಪ್ರೋತ್ಸಾಹ, ಪ್ರಚೋದನೆಯ ಕ್ರಮಗಳು ಒದಗಿಸಬೇಕು. ಇತರ ಮಕ್ಕಳೊಂದಿಗೆ ಜಗಳವಾಡಿದ, ಹಿಂಸೆಮಾಡಿದನೆಂಬ ದೂರು ಬಂದಾಗ ಇವನಿಗೂ ಪ್ರತಿಶಿಕ್ಷೆ, ನಿಂದನೆ ಕೊಡುವ ಮನಸ್ಸು ನಿಮ್ಮಿಂದ ಬರದಂತೆ ಎಚ್ಚರವಹಿಸಿ. ಇಂತಹ ಸಮಸ್ಯೆಗಳಿರುವ ಮಕ್ಕಳ ಮನಸ್ಸು ಸದಾ ಉದ್ರಿಕ್ತ ಸ್ಥಿತಿಯಲ್ಲಿರುತ್ತದೆ. ಅದುದರಿಂದ ಅವನ ನಡೆನುಡಿಗಳ ಬಗ್ಗೆ ಅರಿವು ಬರುವ ಸತತ ಪ್ರಯತ್ನ ಬೇಕು. ನಿಮ್ಮಲ್ಲಿ ಸಮಾಧಾನ ಮತ್ತು ಸಾವಧಾನದ ಮನಸ್ಸು ಇದ್ದಾಗ ಮಾತ್ರವಿದು ಸಾಧ್ಯ ಎನ್ನುವುದನ್ನು ಮರೆಯಬೇಡಿ.

**ನಿಮ್ಮ ಪ್ರಶ್ನೆಗಳನ್ನು ಕಳುಹಿಸಬೇಕಾದ ವಿಳಾಸ:** ಸಂಪಾದಕರು, 'ಸುಧಾ', 'ನನ್ನ ಮಗು ಹೀಗೇಕೆ?' ವಿಭಾಗ, 75, ಎಂಜಿ. ರಸ್ತೆ, ಬೆಂಗಳೂರು–560001,
ಮೊಬೈಲ್ 9880937122 email: psychologist.sridhara@a1-mind.com